ದಿನಾಂಕಃ 26.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

3. ದಿಃ 22.06.2018 ರಂದು ಪೋಲೀಸರು ನನ್ನ ತಂದೆ ತಾಯಿಗೆ ನೋಟೀಸನ್ನು ಕೊಟ್ಟು ಡಿ.ಎನ.ಎ. ಪರೀಕ್ಷೆಗಾಗಿ ರಕ್ತದ ಮಾದರಿಯನ್ನು ನೀಡಲು ದಿಃ 25.06.2018 ರಂದು ಬರುವಂತೆ ಸೂಚಿಸಿದ್ದರು. ಅದರಂತೆ ದಿಃ 25.06.2018 ರಂದು ನಾನು, ನನ್ನ ತಂದೆ ತಾಯಿ ಕಡೂರು ವೃತ್ತ ನಿರೀಕ್ಷಕರ ಕಚೇರಿಗೆ ಹೋದೆವು. ಅಲ್ಲಿಂದ ಕಡೂರು ಸರ್ಕಾರಿ ಆಸ್ಪತ್ರೆಗೆ ನಮ್ಮನ್ನು ಪೋಲೀಸರು ಕರೆದುಕೊಂಡು ಹೋದರು.

4. ಅಲ್ಲಿ ವೈದ್ಯರು ನನ್ನ ತಂದೆ ಮತ್ತು ತಾಯಿಯಾದ ಚಿನ್ನಪ್ಪ ಮತ್ತು ಯಶೋದಮ್ಮರವರ ರಕ್ತದ ಮಾದರಿಗಳನ್ನು ಡಿ.ಎನ್.ಎ.ಪರೀಕ್ಷೆಗಾಗಿ ತೆಗೆದುಕೊಂಡರು. ಆಗ ವೈದ್ಯರು ನನ್ನ ತಂದೆ ಮತ್ತು ತಾಯಿಯ ಒಪ್ಪಿಗೆಯನ್ನು ಪಡೆದುಕೊಂಡು ಫಾರಂ ಗೆ ನನ್ನ ತಂದೆಯ ಸಹಿ ಮತ್ತು ನನ್ನ ತಾಯಿಯ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು ಮತ್ತು ಸದರಿ ಫಾರಂ ಗಳಿಗೆ ಸಾಕ್ಷಿಗಳಾಗಿ ನಾನು ಮತ್ತು ನನ್ನ ತಮ್ಮನಾದ ಶಿವಾನಂದ ಸಹ ಸಹಿ ಮಾಡಿದ್ದೇವೆ.

5. ನನ್ನ ತಂದೆ, ನಾನು ಮತ್ತು ನನ್ನ ತಮ್ಮ ಶಿವಾನಂದ ಸಹಿ ಮಾಾಡಿರುವ ಫಾರಂ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿರುತ್ತದೆ. ನಿಪಿ.12 ರಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.12(ಡಿ) ಎಂದು ಗುರುತಿಸಲಾಯಿತು. ನನ್ನ ತಾಯಿಯ ಹೆಬ್ಬೆಟ್ಟಿನ ಗುರುತು ಮತ್ತು ನಾನು ಮತ್ತು ನನ್ನ ತಮ್ಮ ಶಿವಾನಂದ ಸಹಿ ಮಾಾಡಿರುವ ಫಾರಂ ನ್ನು ನೋಡುತ್ತಿದ್ದು

ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ನಿಪಿ.13 ರಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ನಿಪಿ.13 ರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ನನ್ನ ತಾಯಿಯದ್ದಾಗಿರುತ್ತದೆ. ನಿಪಿ.13 ರಲ್ಲಿರುವ ನನ್ನ ತಮ್ಮ ಶಿವಾನಂದನ ಸಹಿಯನ್ನು ನಾನು ಗುರುತಿಸುತ್ತೇನೆ. ಸಾಕ್ಷಿಯು ಸದರಿ ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿಪಿ.13(ಬಿ) ಎಂದು ಗುರುತಿಸಲಾಯಿತು.

6. ನಂತರ ಕಡೂರು ಸರ್ಕಾರಿ ಆಸ್ಪತ್ರೆಯಿಂದ ಕಡೂರು ವೃತ್ತ ನಿರೀಕ್ಷಕರ ಕಚೇರಿಗೆ ಹೋದೆವು. ನಂತರ ನಮ್ಮನ್ನು ಕಡೂರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಂತರ ಸದರಿ ಠಾಣೆಯ ಆವರಣದಲ್ಲಿದ್ದ ಒಂದು ಬೈಕನ್ನು ಪೋಲೀಸರು ತೋರಿಸಿದರು. ಸದರಿಬೈಕು ನನ್ನ ಹೆಸರಿನಲ್ಲಿದ್ದ ಕೆಎ-18/ಯು-3398 ನೊಂದಣಿ ಸಂಖ್ಯೆಯುಳ್ಳ ಹೀರೋ ಹೋಂಡ ಸೂಪರ್ Splendor ಬೈಕಾಗಿರುತ್ತದೆ. ಸದರಿ ಬೈಕನ್ನು ನನ್ನ ತಮ್ಮ ಮೃತ ಮಂಜುನಾಥ ಉಪಯೋಗಿಸುತ್ತಿದ್ದನು. ಸದರಿ ಬೈಕನ್ನು ನೋಡಿದರು ಗುರುತಿಸುತ್ತೇನೆ. ಸಾಕ್ಷಿ ಗೆ ಮೂರು ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋಗಳಲ್ಲಿ ನನ್ನ ಹೆಸರಿನಲ್ಲಿದ್ದ ಮತ್ತು ನನ್ನ ತಮ್ಮ ಮೃತ ಮಂಜುನಾಥ ಬಳಸುತ್ತಿದ್ದ ಕೆಎ-18/ಯು-3398 ನೊಂದಣಿ ಸಂಖ್ಯೆಯುಳ್ಳ ಹೀರೋ ಹೋಂಡ ಸೂಪರ್ Splendor ಬೈಕು ಕಂಡುಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ.14 ರಿಂದ 16 ಎಂದು ಗುರುತಿಸಲಾಯಿತು.

7. ನನ್ನ ತಮ್ಮ ಮಂಜುನಾಥನ ಮೃತ ದೇಹ ದೊರೆತಾಗ ಮತ್ತು ಮೇಲೆ ತಿಳಿಸಿದ ಬೈಕನ್ನು ನಾನು ನೋಡಿ ಗುರುತಿಸಿದಾಗ ಪೋಲೀಸರು ನನ್ನ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು. )

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ